**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-8)**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು (1965ರ ಕರ್ನಾಟಕ ಅಧಿನಿಯಮ 15) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 7ಎ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ (1965ರ ಕನಾಟಕ ಅಧಿನಿಯಮ 15) 7ಎ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಆರು ರೂಪಾಯಿಗಳು, ಹನ್ನೆರಡು ರೂಪಾಯಿಗಳು ಮತ್ತು ಆರು ರೂಪಾಯಿಗಳ" ಎಂಬ ಪದಗಳಿಗೆ "ಇಪ್ಪತ್ತು ರೂಪಾಯಿಗಳು, ನಲವತ್ತು ರೂಪಾಯಿಗಳು ಮತ್ತು ಇಪ್ಪತ್ತು ರೂಪಾಯಿಗಳ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕಾರ್ಮಿಕ ಕಲ್ಯಾಣ ನಿಧಿಗೆ ನಿಯೋಜಿತರು, ನಿಯೋಜಕರು ಮತ್ತು ಸರ್ಕಾರದ ವಂತಿಗೆಯ ದರವನ್ನು ಆರು ರೂಪಾಯಿಗಳು, ಹನ್ನೆರಡು ರೂಪಾಯಿಗಳು ಮತ್ತು ಆರು ರೂಪಾಯಿಗಳಿಂದ ಅನುಕ್ರಮವಾಗಿ ಇಪ್ಪತ್ತು ರೂಪಾಯಿಗಳು, ನಲವತ್ತು ರೂಪಾಯಿಗಳು ಮತ್ತು ಇಪ್ಪತ್ತು ರೂಪಾಯಿಗಳಿಗೆ ಹೆಚ್ಚಿಸಲು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ರೂ. 4,62,33,810 (ನಾಲ್ಕು ಕೋಟಿ ಅರವತ್ತೆರಡು ಲಕ್ಷ ಮೂವತ್ಮೂರು ಸಾವಿರದ ಎಂಟುನೂರ ಹತ್ತು ರೂಪಾಯಿಗಳ) ಹೆಚ್ಚುವರಿ ಅಂದಾಜು ವೆಚ್ಚವನ್ನು ಒಳಗೊಂಡಿರುತ್ತದೆ.

**ಸಂತೋಷ್ ಲಾಡ್**
ಕಾರ್ಮಿಕ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 1965ರ (1657ರ ಕರ್ನಾಟಕ ಅಧಿನಿಯಮ ಸಂಖ್ಯೆ 15) ಉದ್ಧೃತ ಭಾಗ**

**Xx xx xx**

**7ಎ. ವಂತಿಗೆ.–** (1) ಕಾರ್ಯ ಸಂಸ್ಥೆಯಲ್ಲಿರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ, ನಿಯೋಜಕ, ನಿಯೋಜಿತ ಮತ್ತು ರಾಜ್ಯ ಸರ್ಕಾರದಿಂದ ಸಂದಾಯವಾಗಬೇಕಾದ ನಿಯೋಜಕನ ವಂತಿಗೆ, ನಿಯೋಜಿತರ ವಂತಿಗೆ ಮತ್ತು ರಾಜ್ಯ ಸರ್ಕಾರದ ವಂತಿಗೆ, ಇವುಗಳನ್ನು ಒಳಗೊಂಡ ವಂತಿಗೆಯನ್ನು ಮಂಡಲಿಗೆ, ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ವಂತಿಗೆಗಳು ಆ ನಿಧಿಯ ಭಾಗವಾಗತಕ್ಕದ್ದು.

(2) ಯಾವುದೇ ವರ್ಷದ ಡಿಸೆಂಬರ್ 31 ರಂದು ಕಾರ್ಯ ಸಂಸ್ಥೆಯ ರಿಜಿಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ನಿಯೋಜಿತ ಮತ್ತು ರಾಜ್ಯ ಸರ್ಕಾರವು ಆ ವರ್ಷಕ್ಕಾಗಿ ಆರು ರೂಪಾಯಿಗಳು, ಹನ್ನೆರಡು ರೂಪಾಯಿಗಳು ಮತ್ತು ಆರು ರೂಪಾಯಿಗಳ ಮೊತ್ತವನ್ನು ಅನುಕ್ರಮವಾಗಿ ವಂತಿಗೆಯೆಂದು ಸಂದಾಯ ಮಾಡತಕ್ಕದ್ದು.

**Xx xx xx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1125–ಪ್ರತಿಗಳು 1000, 16ನೇ ಮಾರ್ಚ್, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**
**(Adjourned Meetings)**

# THE KARNATAKA LABOUR WELFARE FUND (AMENDMENT) BILL, 2017
## (L.A. Bill No. 8 of 2017)

A Bill further to amend the Karnataka Labour Welfare Fund Act, 1965.

Whereas, it is expedient further to amend the Karnataka Labour Welfare Fund Act, 1965 (Karnataka Act 15 of 1965) for the purposes herein after appearing;

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.-** (1) This Act may be called the Karnataka Labour Welfare Fund (Amendment) Act, 2017.

(2) It shall come into force at once.

**2. Amendment of section 7A.-** In the Karnataka Labour Welfare Fund Act, 1965, in section 7A, in sub-section (2), for the words "six rupees, twelve rupees and six rupees", the words "twenty rupees, forty rupees and twenty rupees" shall be substituted.

## STATEMENT OF OBJECTS AND REASONS

It is considered necessary further to amend the Karnataka Labour Welfare Fund Act, 1965 to increase the rate of contribution of Employees, Employers and Government to the Labour Welfare fund from six rupees, twelve rupees and six rupees to twenty rupees, forty rupees and twenty rupees respectively.

Hence, the Bill.

## FINANCIAL MEMORANDUM

There will be an additional approximate expenditure of Rs. 4,62,33,810 (Rupees Four Crores Sixty two Lakhs thirty three thousands eight hundred and ten) by the proposed legislative measure.

**SANTOSH S LAD**
Minister for Labour

**S. Murthy**
Secretary (I/C)
Karnataka Legislative Assembly

## ANNEXURE

**Extract from the Karnataka Labour Welfare Fund Act, 1965**
**(Karnataka Act 15 of 1965)**

**XX XX XX**

**7A. Contribution.-** (1) In respect of every employee in an establishment there shall be paid contribution to the Board comprising the employer's contribution, employee's contribution and State Government's contribution, payable respectively by the employer, the employee and the State Government and the contributions so paid shall form part of the Fund.

(2) In respect of every employee whose name stands in the register of an establishment on 31st December of a year sum of six rupees, twelve rupees and six rupees respectively shall be payable as contribution for that year by the concerned employee, the employer and the State Government.

**XX XX XX**

Government Press, Vikasa Soudha Unit, Bengaluru 16th March, 2017 P7, W.D.1125, Copies 1000